# ನಿರುದ್ಯೋಗ ಮತ್ತು ಸ್ವಯಂ ಉದ್ಯೋಗ

**ಉದ್ಯೋಗವುಳ್ಳವನ ! ಹೊದ್ದುವುದು ಸಿರಿ ಬಂದು !**

**ಉದ್ಯೋಗವಿಲ್ಲದಿರುವವನ ಕರದೊಳಗೆ!**

**ಇದ್ದುದ್ದೂ ಪೋಕು ಸರ್ವಜ್ಞ**

"ನನಗೆ ನೂರು ಜನ ಕಬ್ಬಿಣದಂತಹ ಮಾಂಸಖಂಡ ಹೊಂದಿರುವ ಸಧೃಡ ಯುವಕರನ್ನು ಕೊಡಿ ಈ ದೇಶದ ಚಿತ್ರಣವನ್ನೆ ಬದಲಾಯಿಸುತ್ತೇನೆ" ಎಂದು ಶತಮಾನದ ಹಿಂದೆ ಸ್ವಾಮಿ ವಿವೇಕಾನಂದರು ಹೇಳಿದ್ದರು. ಇಂದು ಇಡೀ ಜಗತ್ತಿನ ಚಿತ್ರಣವನ್ನೆ ಬದಲಾಯಿಸಬಲ್ಲ ಶಕ್ತಿ ಇರುವ ಅತಿ ಹೆಚ್ಚು ಯುವ ಸಂಪನ್ಮೂಲವನ್ನು ನಮ್ಮ ದೇಶ ಹೊಂದಿದ್ದರೂ ಸಹ ಸದ್ಬಳಕೆಯಾಗದೆ ವ್ಯರ್ಥವಾಗುತ್ತಿರುವುದು ನಮ್ಮ ದೇಶದಲ್ಲೆ. ಇದಕ್ಕೆ ಕಾರಣ ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯೂ ಒಂದು.

ನಿರುದ್ಯೋಗವು ಮಾನವ ಸಂಪತ್ತಿನ ಅದಕ್ಷ ಉಪಯೋಗದ, ಕಡಿಮೆ ಉತ್ಪದನೆ ಮತ್ತು ನಿಕೃಷ್ಟ ಜೀವನ ಮಟ್ಟದ ಕುರುಹು. ಭಾರತದಲ್ಲಿ ನಿರುದ್ಯೋಗ ಎಂಬುದು ಒಂದು ಜ್ವಲಂತ ಸಮಸ್ಯೆಯಾಗಿದ್ದು, ಅದು ಇತರೆ ಹಿಂದುಳಿದ ರಾಷ್ಟ್ರಗಳಂತೆ ಭಾರತವನ್ನು ಹತಾಶೆಯ ಪರಿಸ್ಥಿತಿಗೆ ತಳ್ಳಿದೆ. ಪರಿಣಾಮವಾಗಿ ಹಸಿವು, ನೋವು, ನರಳುವಿಕೆ, ಅಪೌಷ್ಟಿಕಾಂಶ, ಅನಕ್ಷರತೆ, ಬಡತನ. ಇವು ಭಾರತದಲ್ಲಿ ಸಾಮಾನ್ಯವಾಗಿದೆ.

## <u>ನಿರುದ್ಯೋಗ</u> :-

ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿಯನ್ನು ನಿರುದ್ಯೋಗ ಎನ್ನುತ್ತೇವೆ. ಭಾರತದಲ್ಲಿ ನಿರುದ್ಯೋಗದ ರೂಪುರೇಷೆಯನ್ನು ನೋಡಬೇಕಾದರೆ ನಿರುದ್ಯೋಗದ ದರ 2017 ರಲ್ಲಿ 3.51% ರಷ್ಟಿದ್ದು 2018 ರಲ್ಲಿ 3.52% ರಷ್ಟಾಗಿದೆಯೇ ಹೊರತು ಕಡಿಮೆಯಂತೂ ಆಗುತ್ತಿಲ್ಲ. ನಿರುದ್ಯೋಗಿಗಳ ದರದ ಪ್ರಕಾರ 2017 ರಲ್ಲಿ 48.26 ಮಿಲಿಯನ್‌ಷ್ಟು ಇದ್ದು,2018 ರಲ್ಲಿ 44.85 ಮಿಲಿಯನ್ ಆಗಿದೆ. ನಿರುದ್ಯೋಗ



downloaded from: www.kpscvaani.com

ಸಮಸ್ಯೆ ಕಾಡುತ್ತಿರುವ ಜಗತ್ತಿನ 20 ರಾಷ್ಟ್ರಗಳಲ್ಲಿ ಭಾರತ 16 ನೇ ಸ್ಥಾನದಲ್ಲಿದೆ. ಪ್ರಥಮವಾಗಿ ಸ್ಪೇನ್ ಮತ್ತು ದ್ವಿತೀಯವಾಗಿ ಬ್ರೆಜಿಲ್ ದೇಶಗಳಿವೆ.....

## ಸ್ವಯಂ ಉದ್ಯೋಗ :-

ಸರ್ಕಾರಿ ಮತ್ತು ಖಾಸಗಿ ವಲಯಗಳನ್ನು ಅವಲಂಬಿಸದೆ(ವಿದ್ಯುತ್, ಹಣ, ಇತರೆ ಸೌಲಭ್ಯ ಹೊರತುಪಡಿಸಿ) ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ಕೈಗೊಳ್ಳುವ/ನಿರ್ವಹಿಸುವ ವೃತ್ತಿಗಳನ್ನು ಸ್ವಯಂ ಉದ್ಯೋಗ ಎನ್ನಬಹುದು.

ನಿರುದ್ಯೋಗದ ಪ್ರಕಾರಗಳು :

- **ಕಾರ್ಯಾತ್ಮಕ ನಿರುದ್ಯೋಗ** – ಒಬ್ಬ ವ್ಯಕ್ತಿಯು ಒಂದು ಉದ್ಯೋಗವನ್ನು ತೊರೆದು ಮತ್ತೊಂದು ಉದ್ಯೋಗವನ್ನು ಹುಡುಕುವಾಗ ಎದುರಿಸುವುದೇ ಕಾರ್ಯಾತ್ಮಕ ನಿರುದ್ಯೋಗ ಎನ್ನುವರು.
- **ರಚನಾತ್ಮಕ ನಿರುದ್ಯೋಗ**– ಉದ್ಯೋಗ ಮಾಡುವವರ ಸಂಖ್ಯೆ ಹೆಚ್ಚು ಇದ್ದು, ಉದ್ಯೋಗ ಮತ್ತು ಉದ್ಯೋಗ ಮಾಡಲು ಬಯಸುವ ವ್ಯಕ್ತಿಗಳ ಕೌಶಲ್ಯ, ಅನುಭವ ಅರ್ಹತೆಯ ನಡುವೆ ಹೊಂದಾಣಿಕೆ ಇರದ ಸ್ಥಿತಿಯಾಗಿದೆ.
- **ಋತುಮಾನದ ನಿರುದ್ಯೋಗ** - ನಿರ್ದಿಷ್ಟ ಋತುವಿನಲ್ಲಿ ಮಾತ್ರ ಉದ್ಯೋಗವಿದ್ದು, ಇತರ ಸಮಯದಲ್ಲಿ ಉದ್ಯೋಗ ಇಲ್ಲದೇ ಇರುವ ಸ್ಥಿತಿಯನ್ನು ಋತುಮಾನದ ನಿರುದ್ಯೋಗ ಎನ್ನುತ್ತಾರೆ.
- **ಮಾರು ವೇಷದ ನಿರುದ್ಯೋಗ** – ಒಂದು ಕೆಲಸವನ್ನು ಅಗತ್ಯಕ್ಕಿಂತ ಹೆಚ್ಚು ಜನರು ಮಾಡುವ ಸ್ಥಿತಿಯನ್ನು ಮಾರುವೇಷದ ನಿರುದ್ಯೋಗ ಎನ್ನುವರು.
- ಘರ್ಷಣಾತ್ಮಕ ನಿರುದ್ಯೋಗ
- ವಾರದಸ್ಥಿತಿ ನಿರುದ್ಯೋಗ
- ದಿನವಾಹಿ ನಿರುದ್ಯೋಗ



downloaded from: www.kpscvaani.com

- ವಾಡಿಕೆಯ ಸ್ಥಿತಿ ನಿರುದ್ಯೋಗ
- ತೆರೆದ ನಿರುದ್ಯೋಗ
- ಜನಸಂಖ್ಯಾ ನಿರುದ್ಯೋಗ
- ತಂತ್ರಜ್ಞಾನ ನಿರುದ್ಯೋಗ
- ವರ್ಗಾವಣೆಯ ನಿರುದ್ಯೋಗ

**ನಿರುದ್ಯೋಗಕ್ಕೆ ಕಾರಣಗಳು** :-

- **ಅತಿಯಾದ ಜನಸಂಖ್ಯೆ** : ಏರುತ್ತಿರುವ ಜನಸಂಖ್ಯೆಗೆ ಉದ್ಯೋಗಗಳನ್ನು ಒದಗಿಸಲಾಗದೆ ನಿರುದ್ಯೋಗ ಸಮಸ್ಯೆಯುಂಟಾಗುತ್ತದೆ.
- **ಯಾಂತ್ರೀಕರಣ** : ಇಂದಿನ ಎಲ್ಲಾ ಕ್ಷೇತ್ರಗಳಲ್ಲೂ ಯಾಂತ್ರೀಕರಣ ಯಥೇಚ್ಛವಾಗಿದ್ದು, ಸಣ್ಣ ಬಟ್ಟೆ ಹೊಲೆಯುವುದರಿಂದ ದೊಡ್ಡ ದೊಡ್ಡ ಕೈಗಾರಿಕೆಗಳವರೆಗೂ ಯಂತ್ರಗಳಿಂದಲೇ ಕೆಲಸ ನಡೆಯುತ್ತಿದೆ. ಇದರಿಂದ ಸಹಜವಾಗಿಯೇ ನಿರುದ್ಯೋಗ ಸಮಸ್ಯೆ ತಲೆಯೆತ್ತುವುದು.
- **ಅತಿಯಾದ ಶ್ರಮ ವಿಭಜನೆ**: ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣಿತಿ, ಕೌಶಲ್ಯ ಹಾಗೂ ಲಿಂಗ ಭೇಧಗಳ ಆಧಾರದ ಮೇಲೆ ಅತಿಯಾದ ಶ್ರಮ ವಿಭಜನೆಯಿಂದ ನಿರುದ್ಯೋಗ ಸಂಭವಿಸುತ್ತದೆ.
- **ಅನಕ್ಷರತೆ**: ಅನಕ್ಷರತೆಯಿಂದಾಗಿ ಶಾಲೆ, ವೈದ್ಯಕೀಯ, ಸಾರಿಗೆ-ಸಂಪರ್ಕ, ರೈಲ್ವೆ, ಆಡಳಿತ, ಅಂಚೆ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗದಿಂದ ವಂಚಿತರಾಗುತ್ತಾರೆ. ಇದರಿಂದ ನಿರುದ್ಯೋಗ.
- **ಕಂಪ್ಯೂಟರೀಕರಣ:** ಇಂದು ಸಕಲ ಕ್ಷೇತ್ರಗಳಲ್ಲೂ ಕಂಪ್ಯೂಟರ್‌ನ ಬಳಕೆಯಿದೆ. ನೂರು ಜನ ಮಾಡುವ ಕೆಲಸವನ್ನು ಕಂಪ್ಯೂಟರ್ ನಿರ್ವಹಿಸಬಲ್ಲದು. ಕಂಪ್ಯೂಟರ್ ಆವಿಷ್ಕಾರದ ನಂತರ ನಿರುದ್ಯೋಗ ಸಮಸ್ಯೆ ಏರಿಕೆ ಕಂಡಿದೆ.


downloaded from: www.kpscvaani.com

- **ಕೃಷಿಯ ನಿರ್ಲಕ್ಷ್ಯ:** ನಮ್ಮ ದೇಶದ ಶೇ.೬೦ರಷ್ಟು ಜನರಿಗೆ ಕೃಷಿ ಉದ್ಯೋಗ ನೀಡಿದ್ದು ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿರುವುದರಿಂದ, ದಿನೇ ದಿನೇ ನಿರುದ್ಯೋಗ ಸಮಸ್ಯೆ ಏರುತ್ತಿದೆ.
- **ಸಾಮಾಜಿಕ ಅಸಮಾನತೆ ಮತ್ತು ಬಂಡವಾಳ ಕೊರತೆ** : ನಿರುದ್ಯೋಗ ಸಮಸ್ಯೆ ಅಲ್ಲ. ಉದ್ಯೋಗ ಮಾಡಲು ಅವಕಾಶವಿದ್ದರೂ ಉದ್ಯೋಗ ಮಾಡದೆ ನಿರುದ್ಯೋಗ ಸೃಷ್ಟಿಸುತ್ತೇವೆ.

**<u>ನಿರುದ್ಯೋಗದಿಂದಾಗುವ ಪರಿಣಾಮಗಳು</u> :-**

ಬಡತನ, ಮೋಸ, ಅನಾರೋಗ್ಯ, ವಂಚನೆ, ಭ್ರಷ್ಟಚಾರ, ಕಳ್ಳತನ, ಕೌಟುಂಬಿಕ ವಿಘಟನೆ, ವ್ಯಭಿಚಾರ.

ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳು :

- ಜನಸಂಖ್ಯಾ ನಿಯಂತ್ರಣ ಕ್ರಮ
- ಶೈಕ್ಷಣಿಕ ಸುಧಾರಣಾ ಯೋಜನೆ
- ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
- ಪಂಚವಾರ್ಷಿಕ ಯೋಜನೆಗಳು
- ಕೃಷಿ ಕ್ಷೇತ್ರದ ಅಭಿವೃದ್ಧಿ
- ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
- ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ
- ಗ್ರಾಮೀಣಾಭಿವೃದ್ಧಿ ಯೋಜನೆಗಳು
- ಉದ್ಯೋಗ ಖಾತರಿ ಯೋಜನೆ
- ಜವಹಾರ್ ರೋಜ್‌ಗಾರ್ ಯೋಜನೆ


downloaded from: www.kpscvaani.com

- ರಾಜೀವ್‌ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ
- ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ
- ಕೂಲಿಗಾರಿ ಕಾಳು ಯೋಜನೆ
- ಉದ್ಯೋಗ ಭರವಸೆ ಯೋಜನೆ
- ಅತಿ ಸಣ್ಣ ರೈತರ ಅಭಿವೃದ್ಧಿ ನಿಗಮ

**ಸ್ವಯಂ ಉದ್ಯೋಗ ಪರಿಕಲ್ಪನೆ** :-

ಸ್ವಯಂ ಉದ್ಯೋಗ ಎಂಬುದೇ ಒಂದು ಅದ್ಭುತ ಪರಿಕಲ್ಪನೆಯಾಗಿದೆ. ಸ್ವಂತ ಉದ್ಯೋಗಿಗಳು ಅಥವಾ ಸ್ವ ಉದ್ಯೋಗದಾರರು ದೇಶದ ಆಧಾರ ಸ್ಥಂಭವಾಗಿದ್ದಾರೆ. ಒಂದು ರಸ್ತೆಯ ಮೂಲೆಯಲ್ಲಿನ ಚಹಾದ ಅಂಗಡಿಯಿಂದ ಹಿಡಿದು, ಮಾಮ್ ಅಂಡ್ ಪಾಪ್ ಕಿರಾಣಿ ಅಂಗಡಿ, ಗುಜರಿ ವ್ಯಾಪಾರಿ, ಅಂತರ್ಜಾಲ ಸೈಬರ್ ಅಂಗಡಿಗಳು ಮುಂತಾದವೆಲ್ಲ ಸ್ವ-ಉದ್ಯೋಗ ಸಂಸ್ಥೆಗಳಾಗಿವೆ.

ಯಾರೇ ಒಬ್ಬ ಮನುಷ್ಯನಾಗಲಿ ಸ್ವ-ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಯಾವುದಾದರೂ ಒಂದು ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಲು ಅನುಕೂಲತೆಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ

ಜಾಹಿರಾತು ಸೇವಾ ಸಂಸ್ಥೆಗಳು

ಮಾರುಕಟ್ಟೆ ಸಲಹಾ ಸಂಸ್ಥೆ

ಕೈಗಾರಿಕಾ ಸಲಹಾ ಸಂಸ್ಥೆ

ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಮಸ್ಥೆಗಳು

ಛಾಯಾಪ್ರತಿ ತೆಗೆಯುವ ಕೇಂದ್ರಗಳು

ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು



downloaded from: www.kpscvaani.com

ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು

ಅಂತರ್ಜಾಲ ಮತ್ತು ಸಂವಹನ ಅಂಗಡಿಗಳು

ದೂರದರ್ಶನ ಜಾಲ ಬಂಧದ ಸೇವಾ ಕ್ಷೇತ್ರಗಳು

ಕ್ರೆಚ್ ಮತ್ತು ಬ್ಯೂಟಿ ಪಾರ್ಲರ್‌ಗಳು

ಸ್ವಯಂ ಉದ್ಯೋಗದಲ್ಲಿ ಗಡಿ ಮತ್ತು ಸಣ್ಣ ಕೈಗಾರಿಕೆಗಳ ಪಾತ್ರ

ಗುಡಿ(ಗೃಹ) ಕೈಗಾರಿಕೆಗಳು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರೀಕೃತವಾಗಿರುತ್ತವೆ. ಕೆತ್ತನೆ ಕೆಲಸ, ಬುಟ್ಟಿ ಹೆಣೆಯುವುದು, ಬೊಂಬೆ ತಯಾರು ಮಾಡುವುದು, ಕೈ ಮಗ್ಗದಲ್ಲಿ ಬಟ್ಟೆ ಹಾಗೂ ಕಂಬಳಿ ನೇಯುವುದು, ಚಾಪೆ ತಯಾರಿಕೆ, ಹಗ್ಗ ತಯಾರಿಸುವುದು, ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ ಮುಂತಾದವು ಉದಾಹರಣೆಗಳಾಗಿದ್ದು ಇವುಗಳ ಉತ್ಪನ್ನಗಳು ಹೆಚ್ಚಾಗಿ ಸ್ಥಳೀಯ ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುತ್ತವೆ.

ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಆಧುನಿಕ ಕೌಶಲ್ಯಗಳನ್ನು ಬಳಸಿಕೊಳ್ಳುತ್ತಾರೆ. ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಸೈಕಲ್, ರೇಡಿಯೋ, ವಿದ್ಯುತ್ ಕಂಬ, ಹೊಲಿಗೆ ಯಂತ್ರಗಳು, ಸಿದ್ಧಪಡಿಸಿದ ಉಡುಪುಗಳು, ಸಾಬೂನುಗಳು ಮುಂತಾದವು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉದಾಹರಣೆಗಳಾಗಿವೆ. ಈ ಕೈಗಾರಿಕೆಗಳ ಅನೇಕ ಉತ್ಪನ್ನಗಳು ರಫ್ತಾಗುತ್ತಿವೆ.

ಒಟ್ಟಾರೆ ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಅನೇಕ ಜನರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡುತ್ತವೆ. ಹೆಚ್ಚು ಜನರಿಗೆ ಉದ್ಯೋಗ ನೀಡುವುದರಿಂದ ಜನರ ಜೀವನ ಮಟ್ಟ ಉತ್ತಮಗೊಳ್ಳುತ್ತದೆ. ಜನರ ಪರ್ಯಾಯ ಉದ್ಯೋಗಕ್ಕೂ ಅವಕಾಶ ಸಿಗುತ್ತದೆ ಅಲ್ಲದೆ ಕರಕುಶಲಕಲೆಗಳು ಜನರ ಸುಪ್ತ ಪ್ರತಿಭೆಯನ್ನು ಹೊರ ತರುತ್ತದೆ.



downloaded from: www.kpscvaani.com

ಒಂದು ಕಾಲಕ್ಕೆ 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಉಕ್ತಿಯಿದ್ದುದನ್ನು ಗಮನಿಸಬಹುದು. ಈಗಿನ ಬದಲಾದ ಪರಿಸ್ಥಿತಿಯಲ್ಲಿ ಅದನ್ನು ಈಗ 'ಉದ್ಯೋಗಂ ಮಾನವ ಲಕ್ಷಣಂ' ಎಂದು ತಿದ್ದಿಕೊಳ್ಳಬೇಕಾಗಿದೆ.

ಒಂದು ರೀತಿ ಹೇಳುವುದಾದರೆ ನಿರುದ್ಯೋಗ ಒಂದು ಸಮಸ್ಯೆಯೇ ಅಲ್ಲ. ಬದುಕಲು ನೂರೆಂಟು ದಾರಿಗಳಿವೆ. ಸಹಸ್ರಾರು ಅವಕಾಶಗಳಿವೆ. ಸ್ವೀಕರಿಬೇಕು ಹೊಂದಿಕೊಳ್ಳಬೇಕಷ್ಟೇ.

'ಪಾಲಿಗೆ ಬಂದದ್ದು ಪಂಚಾಮೃತ' ಎಂದ ಹಾಗೆ ಸಣ್ಣ ವೃತ್ತಿಯನ್ನೇ ತೃಪ್ತಿಯಿಂದ, ಮನಸ್ಸು ಗೊಟ್ಟು ಮಾಡಿದರೆ ಯಶಸ್ಸು ತಾನಾಗಿಯೇ ಬರುವುದು ಏನಂತೀರಾ......?



**<u>ಬರಹಗಾರರು</u>**
**ಶಿವರಾಜ್ ನಾಯಕ್ ಬಿ.ಎಸ್ಸಿ,**
**ಬೆಂಗಳೂರು.**






downloaded from: www.kpscvaani.com